# ಸಂಬಂಜ ಅನ್ನೋದು ದೊಡ್ಡದು ಕನಾ

ವಿದೇಶದಲ್ಲಿ ಸುಸೂತ್ರವಾಗಿ ಹೆರಿಗೆಯಾಯಿತಂತೆ. ಹಾಗೊಂದು ಸುದ್ದಿ ತಣ್ಣಗೆ ಹೊರಬಿದ್ದಿತ್ತು. ಆಮೇಲೆ ಒಂದು ಮಾಲ್‌ನ ಮುಂಭಾಗದಲ್ಲಿ 'ಸಪತೀಕರಾಗಿ' ಅವರು ಕಾಣಿಸಿಕೊಂಡದ್ದು ಒಂದೇಒಂದು ಪತ್ರಿಕೆಯಲ್ಲಿ ಲೀಕ್ ಆಯಿತು. ಮನಃಪೂರ್ವಕವಾಗಿಯೇ ಅವರು ಅದನ್ನು ಲೀಕ್ ಮಾಡಿದ್ದರು. ಅಂಬೆಗಾಲಿಕ್ಕುತ್ತಿದ್ದ ಮಗು ಆಗಷ್ಟೇ ನಡೆಯತೊಡಗಿತ್ತು. ಈಗ ಆ ಮಗುವಿನ ಹೆಸರಿನಲ್ಲಿ ಸಿನಿಮಾ ನಿರ್ಮಾಣದ ಬ್ಯಾನರ್ ಇದೆ. ಆ ತಾಯಿಗಂತೂ ಎರಡು ಹೆಸರು. ನಿರ್ಮಾಪಕಿಯಾಗಿ ಎರಡು ಪದ; ನಾಯಕಿಯಾಗಿ ಒಂದೇ ಪದ. ಎರಡನೇ ಪದ ಅವರ ಪತಿರಾಯರದ್ದು ಎಂದು ವಿಶೇಷವಾಗಿ ಏನೂ ಹೇಳಬೇಕಾಗಿಲ್ಲ.

ದೂರದೂರಿಂದ ಬಂದು, ಗಾಂಧಿನಗರದ ಗಲ್ಲಿಗಳಲ್ಲಿ ಒಂದು ಸುತ್ತು ಹಾಕಿ, ಅವಕಾಶದ ಏಣಿಯನ್ನು ಚಕಚಕನೆ ಏರಿ, ಗ್ಲ್ಯಾಮರ್ ಆಗಿ ಕೋಳಿ ಹಾಡಿನಲ್ಲಿ ಕುಣಿದು, ತಂಗಿ ಪಾತ್ರಧಾರಿಯಾಗಿ ಅತ್ತೂಕರೆದು ಮಾಡಿದ ನಟಿ ತೆಗೆದುಕೊಂಡದ್ದು ಐದು ವರ್ಷದ ದೊಡ್ಡ ಬ್ರೇಕ್. ಮದುವೆ ಗುಟ್ಟಾಗಿತ್ತು. ಮಗು ಹುಟ್ಟಿದ ಮೇಲಷ್ಟೇ ರಟ್ಟಾಗಿದ್ದು. ಪತಿರಾಯರು ಒಂದೂವರೆ ಕಾಲನ್ನು ರಾಜಕೀಯದಲ್ಲೂ, ಅರ್ಧ ಕಾಲನ್ನು ಚಿತ್ರರಂಗದಲ್ಲೂ ಇಟ್ಟುಕೊಂಡಿದ್ದವರು. ನಿರ್ಮಾಣದ ಅನುಭವ ಅವರಿಗಿತ್ತು. ಅವರ ಕೃಪೆಯಿಂದ ಮಗಳ ಹೆಸರಿನ ಬ್ಯಾನರ್ ಕಟ್ಟಿದ ನಟಿ ಒಂದು ಸಿನಿಮಾಗೆ ಹಣ ಹೂಡಿ, ಲಾಭವೂ ಇಲ್ಲ; ನಷ್ಟವೂ ಇಲ್ಲ ಎಂಬಂಥ ಫಲ ಉಂಡರು.

ತಮ್ಮ ದೇಹದ ಆಕಾರ ಬದಲಾಗದಂತೆ ನಿಗಾ ವಹಿಸಿದ ನಟಿ ನಾಯಕಿಯಾಗಿ ತಮ್ಮ ಪುನರಾಗಮನದ ಚಿತ್ರದ ಮುಹೂರ್ತದ ದಿನ ಕಪ್ಪು ಗೌನ್ ತೊಟ್ಟಿದ್ದರು. ಕಾಲುಮೇಲೆ ಕಾಲು ಹಾಕಿ ಕುಳಿತುಕೊಳ್ಳುವುದು ಸಭಾಮರ್ಯಾದೆ ಎಂಬುದು ಅವರ ಭಾವನೆ. ವರ್ಷಕ್ಕೆ ಏಳು ಚಿತ್ರಗಳ ನಿರ್ಮಾಣ, ಮೂರರಲ್ಲಿ ನಾಯಕಿಯಾಗಿ ನಟನೆ– ಇದು ಅವರ ಗುರಿ. 'ಅವಾರ್ಡ್ ಫಿಲ್ಮ್‌ಗಳಲ್ಲೂ ನಟಿಸಲು ನಾನು ಸಿದ್ಧ' ಎಂದು ಅವರು ಹೇಳಿದ್ದಂತೂ ವಿಚಿತ್ರವಾಗಿತ್ತು. 'ಮೂವತ್ತು ತುಂಬುವವರೆಗೆ ರಾಜಕೀಯ ಪ್ರವೇಶವಿಲ್ಲ' ಎಂಬ ಅವರ ಇನ್ನೊಂದು ಮಾತು ಜಾಣತನದ್ದು. ಏಳೆಂಟು ವರ್ಷಗಳ ಹಿಂದೆ ಚಾಲ್ತಿಯಲ್ಲಿದ್ದ, ನಂಬರ್ ಒನ್ ಆಗಿದ್ದ ನಟಿಗಿಂತ ತಾವು ಐದು ವರ್ಷ ಚಿಕ್ಕವರು ಎಂದು ಅವರು ನಗುನಗುತ್ತಾ ಹೇಳಿಕೊಂಡಿದ್ದರಲ್ಲೂ ಹೋಂವರ್ಕ್ ಇತ್ತು. ತಮ್ಮ ವಯಸ್ಸು ಎಷ್ಟು ಎಂದು ಚಿತ್ರೋದ್ಯಮ ಅಂದಾಜು ಮಾಡುತ್ತಲೇ ತಮ್ಮತ್ತ ಅವಕಾಶಗಳನ್ನು ನೀಡಲಿ ಎಂಬ ಪರೋಕ್ಷ ಆಹ್ವಾನ ನೀಡುವಂಥ ಹೋಂವರ್ಕ್ ಅದು.

ಆಗೆಲ್ಲಾ ವೈಯಕ್ತಿಕ ಬದುಕಿನ ಬಗೆಗೆ ಹೇಳಿಕೊಳ್ಳದವರು ಈಗ ಇಷ್ಟು ಧೈರ್ಯ ತಂದುಕೊಂಡದ್ದು ಹೇಗೆ ಎಂಬ ಪ್ರಶ್ನೆ ಮೂಡುತ್ತದಲ್ಲವೇ?

ಅದಕ್ಕೂ ಅವರಲ್ಲಿ ಉತ್ತರವಿದೆ– 'ಎಲ್ಲಕ್ಕೂ ಕಾಲ ಎಂಬುದೊಂದು ಇರುತ್ತದೆ. ಏನೇ ಮಾತನಾಡಬೇಕಾದರೂ ಅದು ಕೂಡಿಬರಲೇಬೇಕು. ಈಗ ಆ ಕಾಲ ಬಂದಿದೆ'! 'ಸಂಬಂಜ ಅನ್ನೋದು ದೊಡ್ಡದು ಕನಾ' ಎಂಬ ದೇವನೂರು ಮಹಾದೇವ ಅವರ ಮಾತು ಇಲ್ಲಿ ಬೇರೆಯದೇ ಅರ್ಥ ಪಡೆದುಕೊಂಡಿದೆ.

–ಎನ್ವಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@deccanherald.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68